<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>

**ಸಿ.ಸಿ. ಸಂಖ್ಯೆಃ 391/21**

**ಸಾಕ್ಷಿಯನ್ನು ದಿಃ 26.02.2024 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಶಿವಗಾಮಿ | ಸಿ.ಡಬ್ಲ್ಯೂಃ **4** | ಪಿ.ಡಬ್ಲ್ಯೂಃ **5** |
| ಗಂಡನ ಹೆಸರು | ಬಾಲರಾಜು | | |
| ವಯಸ್ಸು | **50** ವರ್ಷ | | |
| ಕೆಲಸ | ಕೂಲಿ | | |
| ವಾಸಸ್ಥಳ | ಹುಣಸೂರು | | |

**<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>**

1. ಚಾಸಾ-1 ರಿಂದ 3,5 ರವರು ಪರಿಚಯ ಇಲ್ಲ. 1 ರಿಂದ 3 ನೇ ಆರೋಪಿತರು ಗೊತ್ತು. 4 ನೇ ಆರೋಪಿ ಪರಿಚಯ ಇಲ್ಲ. ನಾನು ನನ್ನ ಮನೆಯನ್ನು ಚಾಸಾ-2 ರವರಿಗೆ ಬಾಡಿಗೆಗೆ ಕೊಟ್ಟಿದ್ದೆ. ನಮ್ಮ ಮನೆಯ ಪಕ್ಕ 1 ನೇ ಆರೋಪಿ ಮನೆ ಇರುತ್ತದೆ.

2. ದಿಃ 22.12.2022 ರಂದು ಸಂಜೆ 6.00 ಗಂಟೆ ನಾನು ನಮ್ಮ ಮನೆಯಲ್ಲಿದ್ದಾಗ ಅಲ್ಲಿ ಅಕ್ಕಪಕ್ಕದವರು ನನಗೆ ಕರೆ ಮಾಡಿ ಗಲಾಟೆ ಆದ ಬಗ್ಗೆ ತಿಳಿಸಿದರು. ನಾನು ಮನೆಯ ಬಳಿ ಬಂದು ನೋಡಿದಾಗ ಎಲ್ಲರೂ ಆಸ್ಪತ್ರೆಗೆ ಹೋಗಿದ್ದರು. ಚಾಸಾ-2, ಅವರ ಗಂಡ, ಮಗ ಆಸ್ಪತ್ರೆಗೆ ಹೋಗಿದ್ದರು. ಚಾಸಾ-2 ರವರ ಮನೆಯಿಂದ ಹೊಗೆ ಬರುವ ವಿಚಾರವಾಗಿ ಚಾಸಾ-2 ಹಾಗೂ 1 ನೇ ಆರೋಪಿಗೆ ಗಲಾಟೆ ಆಗಿದ್ದು, ಚಾಸಾ-2 ರವರ ಗಂಡ ಚಾಸಾ-1 ರವರಿಗೆ ತಲೆ, ಕೈಗೆ ಏಟಾಗಿತ್ತು ಅವರ ಬಟ್ಟೆ ಹರಿದುಹೋಗಿತ್ತು. ಚಾಸಾ-2 ರವರಿಗೆ ಸಹ ಸ್ವಲ್ಪ ಏಟಾಗಿತ್ತು.

3. ನಾನು ಚಾಸಾ-1,2 ರವರನ್ನು ಹುಣಸೂರು ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿರುತ್ತೇನೆ. ಚಾಸಾ-2 ರವರು 1 ನೇ ಆರೋಪಿ ವಿರುದ್ಧ ದೂರು ನೀಡಿದ ವಿಚಾರ ನನಗೆ ಗೊತ್ತಾಯಿತು. ಆ ದಿನ ಯಾರು ಗಲಾಟೆ ಬಿಡಿಸಿದರು ನನಗೆ ಗೊತ್ತಿಲ್ಲ. ಆ ದಿನ ಗಲಾಟೆ ಸಮಯ ನನಗೆ ಯಾವುದೇ ಏಟಾಗಿರಲಿಲ್ಲ.

ನ್ಯಾಯಾಲಯದ ಮುಂದಿರುವ ಮು.ಮಾ-3 ಅನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸದರಿ ಷರ್ಟ್ ಚಾಸಾ-1 ರವರಿಗೆ ಸೇರಿದ್ದು ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಷರ್ಟ್ ರಕ್ತಸ್ರಾವದಿಂದ ಕೂಡಿದ್ದು, ಸ್ವಲ್ಪ ಹರಿದುಹೋಗಿರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ಮು.ಮಾ-1,2 ಅನ್ನು ಸಾಕ್ಷಿ ನೋಡಿ ಗುರುತಿಸಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಭಾಗಶಃ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

## ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ

4. ನಾನು ಸ್ಥಳಕ್ಕೆ ಹೋಗಿ ನೋಡಿದಾಗ ಚಾಸಾ-1 ರವರ ಎಡಕ್ಕೆ, ಬಲಪಕ್ಕೆ ಎಡಕಣ್ಣಿನ ಹುಬ್ಬಿನ ಹತ್ತಿರ ಏಟಾಗಿತ್ತು ಎಂದರೆ ಸರಿ. ಚಾಸಾ-2 ರವರ ಕರಿಮಣಿ ಸರ ಕಿತ್ತುಹೋಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಾನು ಜಗಳ ಬಿಡಿಸಲು ಹೋದಾಗ , 1,2 ನೇ ಆರೋಪಿತರು ಅವರ ಕೈಗಳಿಂದ ನನ್ನ ಮೈಕೈ ಬೆನ್ನಿಗೆ ಹೊಡೆದು ನನ್ನ ಕರಿಮಣಿ ಸರ ಹಿಡಿದು ಎಳೆದು ಕಿತ್ತುಹಾಕಿದರು ಎಂದರೆ ಸರಿಯಲ್ಲ. ಆಗ ನದೀಮ್ ಚಾಸಾ-3 ರವರು ಜಗಳ ಬಿಡಿಸಿದರು ಎಂದರೆ ಸರಿಯಲ್ಲ. ನಂತರ ಜಗಳ ಮುಗಿಸಿ ಹೋಗುವಾಗ ಚಾಸಾ-1 ರವರಿಗೆ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಈ ರೀತಿ ನಾನು ಹೇಳಿಕೆ ಕೊಟ್ಟಿಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ.4 ಎಂದು ಗುರುತಿಸಲಾಯಿತು.

## ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಬಿ.ಜೆ. ಅವರಿಂದ-

5. ನಾನು ನನ್ನ ಮನೆಯನ್ನು ಚಾಸಾ-1 ರವರಿಗೆ 2 ವರ್ಷಗಳ ಹಿಂದೆ ಬಾಡಿಗೆಗೆ ನೀಡಿದ್ದೇವು. ಈ ಬಗ್ಗೆ ಬಾಡಿಗೆ ಕರಾರನ್ನು ಮಾಡಿಕೊಂಡಿರುತ್ತೇವೆ. ನನಗೆ ಗಲಾಟೆ ಬಗ್ಗೆ 6.30 ರಲ್ಲಿ ಗೊತ್ತಾಗಿರುತ್ತದೆ. ಆ ಸಮಯ ನಾನು ನನ್ನ ಮನೆಯಲ್ಲಿ ಇದ್ದೆ. ನಾನು ಘಟನಾ ಸ್ಥಳಕ್ಕೆ ಬಂದಾಗ 6.45 ಗಂಟೆ ಆಗಿತ್ತು. ನಾನು ಸ್ಥಳಕ್ಕೆ ಹೋದಾಗ ಚಾಸಾ-

1,2 ರವರು  ಆಸ್ಪತ್ರೆ ಯಲ್ಲಿ ಇದ್ದರು. ಯಾರು ಯಾರಿಗೆ ಹೊಡೆದರು ಎಂದು ನಾನು ನೋಡಿಲ್ಲ ಎಂದರೆ ಸರಿ. ಸ್ಥಳದಲ್ಲಿ ಯಾವುದೇ ಗಲಾಟೆ ಆಗಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಯಾವುದೇ ಏಟಾಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ಆರೋಪಿತರರು ಯಾವುದೇ ಗಲಾಟೆ ಮಾಡದೆ ಇದ್ದರು ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಇದೆ.

(ಶಿರಿನ್ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ. ಎಂ. ಎಫ್. ಸಿ. , ಹುಣಸೂರು.